ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 18 ಚಾ ಸಾ 30

ಹೆಸರುಃ ರಮೇಶ್

ತಂದೆಯ ಹೆಸರುಃ ಜೀವನ್ ಲಾಲ್

ವಯಸ್ಸುಃ 42 ವರ್ಷ

ಉದ್ಯೋಗಃ ಹೂವು ಮಾರುವುದು.

ವಾಸಃ ಕೆ ಆರ್ ಎಸ್ ,ಸಂತೆಮಾಳ .

ದಿಃ 12.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಗಂಗಾರಾಮು ಮತ್ತು ಆತನ ಹೆಂಡತಿ ಮೃತ ಲಕ್ಷ್ಮಿ ಗೊತ್ತು. ಗಂಗಾರಾಮು ನನ್ನ ಅತ್ತೆಯ ಮಗ. ಲಕ್ಷ್ಮಿ ಮತ್ತು ಗಂಗಾರಾಮುಗೆ 3 ಜನ ಮಕ್ಕಳು. ಲಕ್ಷ್ಮಿಯ ಕುಟುಂಬ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ವಾಸ ಇತ್ತು.

2. ಸದರಿ ಲಕ್ಷ್ಮಿಯ ಕುಟುಂಬ ವಾಸ ಇದ್ದ ಮನೆಯ ಪಕ್ಕದಲ್ಲಿರುವ ಮನೆಯಲ್ಲಿ ಗಂಗಾರಾಮುವಿನ ತಾಯಿ ಮತ್ತು ಸಹೋದರರು ಅವರವರ ಕುಟುಂಬದ ಜೊತೆಯಲ್ಲಿ ವಾಸ ಇದ್ದರು.

3. ಗಂಗಾರಾಮು ಪ್ಲಾಸ್ಟಿಕ್ ಹೂವು ಮತ್ತು ಬಟ್ಟೆ ವ್ಯಾಪಾರವನ್ನು ಊರೂರು ಸುತ್ತಿಕೊಂಡು ತಿಂಗಳಿಗೆ ಒಂದು ಸಲ ಅಥವಾ ಎರಡು ತಿಂಗಳಿಗೆ ಒಂದು ಸಲ ಮನೆಗೆ ಬರುತ್ತಿದ್ದ.

4. ಆ ರೀತಿ ಆತ ವ್ಯಾಪಾರಕ್ಕೆ ಎಂದು ಹೊರಗೆ ಹೋದಾಗ ಮನೆಯಲ್ಲಿ ಲಕ್ಷ್ಮಿ ಮತ್ತು ಆಕೆಯ ಮಕ್ಕಳು ಇರುತ್ತಿದ್ದರು . ಅವರ ಜೊತೆಯಲ್ಲಿ ಗಣೇಶನ ಮಗ ಗೋವಿಂದ ಕೂಡ ಆ ಮನೆಯಲ್ಲಿ ವಾಸ ಮಾಡುತ್ತಿದ್ದ.

5. ಸುಮಾರು ಎರಡು ವರುಷದ ಹಿಂದೆ ಲಕ್ಷ್ಮಿ , ಆಕೆಯ ಮಕ್ಕಳು ಮತ್ತು ಗಣೇಶನ ಮಗ ಗೋವಿಂದನನ್ನು ಲಕ್ಷ್ಮಿಯ ಮನೆಯಲ್ಲಿ ಯಾರೋ ಕೊಲೆ ಮಾಡಿ ಹೋಗಿದ್ದರು.

6. ಆನಂತರ ಐದು ಶವಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ನಾನು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಹೋಗಿದ್ದೇನೆ.

7. ದಿಃ 6.2.2022 ರಂದು ಲಕ್ಷ್ಮಿ ಮತ್ತು ಉಳಿದ ನಾಲ್ಕು ಜನ ಮಕ್ಕಳ ಶವವನ್ನು ನಾನು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರದಲ್ಲಿ ನೋಡಿರುತ್ತೇನೆ.

8. ಆ ರೀತಿ ನಾನು ಶವವನ್ನು ನೋಡಲು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಾಗಾರಕ್ಕೆ ಹೋದಾಗ ಅಲ್ಲಿಗೆ ಪೊಲೀಸರು ಬಂದಿದ್ದರು ಮತ್ತು ನನ್ನನ್ನು ವಿಚಾರಣೆ ಮಾಡಿದ್ದಾರೆ. ಆಗ ನಾನು ರಾಜುವಿನ ಗುರುತನ್ನು ತಿಳಿಸಿದ್ದೇನೆ.

9. ಆ ರೀತಿ ಬಂದ ಪೊಲೀಸರು ರಾಜುವಿನ ಶವವನ್ನು ನೋಡಿದರು . ತಲೆಯ ಹಿಂಭಾಗದಲ್ಲಿ ಬಲವಾಗಿ ಬಿದ್ದ ಏಟುಗಳಿದ್ದವು. ಹಣೆ ಮೇಲೆ ಕತ್ತರಿಸಿದ ಗಾಯ ಇತ್ತು. ಆತನ ದೇಹದಲ್ಲಿ ಒಂದು ಟೀಶರ್ಟ್ , ಒಂದು ನಿಕ್ಕರ್ , ಅಂಡರ್ ವೇರ್ , ಕತ್ತಿನಲ್ಲಿ ಕಪ್ಪು ದಾರ , ಕೈಯಲ್ಲಿ ಒಂದು ಲೋಹದ ಬಳೆ ಮತ್ತು ಕಿವಿಗಳಲ್ಲಿ ಲೋಹದ

ರಿಂಗ್ ಗಳಿದ್ದವು. ಪೊಲೀಸರು ಅವುಗಳನ್ನು ತೆಗೆದು ಮೃತನ ವಾರಸುದಾರರಿಗೆ ಕೊಟ್ಟಿದ್ದಾರೆ .

10. ಆಗ ಪೊಲೀಸರು ಈಗ ನೋಡಿದ ಬರವಣಿಗೆಯನ್ನು ಮಾಡಿದ್ದಾರೆ . ಅದರಲ್ಲಿ ನನ್ನ ರುಜು ಇದೆ . ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ 31 ಮತ್ತು ಸಾಕ್ಷಿಯ ರುಜುವನ್ನು ನಿಪಿ 31ಎ ಎಂದು ಗುರುತಿಸಲಾಯಿತು.

11. ಸದರಿ ಪಂಚನಾಮೆ ಮಾಡುವಾಗ ಈಗ ತೋರಿಸಿದ ಮೂರು ಪೊಟೋಗಳನ್ನು ನಿಪಿ 32ರಂತೆ ತೆಗೆದಿರುತ್ತಾರೆ .

12.ರಾಜುವಿನ ಶವವನ್ನು ನೋಡಿದಾಗ ಯಾವುದೋ ಆಯುಧದಿಂದ ಆತನ ತಲೆಗೆ ಮತ್ತು ಹಣೆಗೆ ಜೋರಾಗಿ ಹೊಡೆದು ಆತನನ್ನು ಸಾಯಿಸಿದ್ದಾರೆ ಎಂದು ಕಂಡುಬಂತು.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

13. ಆ ರೀತಿ ಮದ್ಯಾಹ್ನ 1 ಗಂಟೆಗೆ ಆಸ್ಪತ್ರೆಗೆ ಹೋದ ನಾನು ಸಂಜೆ 4 ಗಂಟೆಯವರೆಗೆ ಇದ್ದೆ .

14. ನಿಪಿ 31 ರಲ್ಲಿ ಏನು ಬರೆದಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)